**International Journal of Academic Research** P-ISSN: 2348-7666: Impact Factor: 6.023
Homepage: https://www.ijar.org.in/
Volume-12, Issue-3, July-Sep-2025
This work is licensed under a Creative Commons Attribution 4.0 International License [CC BY 4.0]

**Research Article**

# ರಂಗಭೂಮಿ: ಸಾಹಿತ್ಯ ಮತ್ತು ಚಿತ್ರಕಲೆಯ ಸಂಬಂಧಗಳು

**ಡಾ. ಕೃಷ್ಣಪ್ಪ. ಕೆ.ಎನ್.**

ಸಹ ಪ್ರಾಧ್ಯಾಪಕ, ಕನ್ನಡ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಚಿಕ್ಕಬಳ್ಳಾಪುರ - ೫೬೨೧೦೧

**Corresponding Author: ಡಾ. ಕೃಷ್ಣಪ್ಪ. ಕೆ.ಎನ್.**

**Abstract**

ರಂಗಭೂಮಿಯು ಜಾಗತಿಕ ಸಾಂಸ್ಕೃತಿಕ ಪರಂಪರೆಯಲ್ಲಿ ತನ್ನದೇ ಆದ ವಿಶಿಷ್ಟ ಸ್ಥಾನವನ್ನು ಹೊಂದಿರುವ ಬಹುಮಾಧ್ಯಮೀಯ ಕಲಾರೂಪವಾಗಿದೆ. ನಾಟಕ ಯಾವಾಗ, ಎಲ್ಲಿ ಮತ್ತು ಹೇಗೆ ಹುಟ್ಟಿಕೊಂಡಿತು ಎಂಬ ಪ್ರಶ್ನೆಗಳಿಗೆ ಇಂದಿಗೂ ಸಂಪೂರ್ಣವಾಗಿ ನಿರ್ವಿವಾದವಾದ ಉತ್ತರ ದೊರೆತಿಲ್ಲ. ಮಾನವನ ಅನುಕರಣಪ್ರವೃತ್ತಿ, ಧಾರ್ಮಿಕ ಆಚರಣೆಗಳು, ಸಮೂಹದ ವಿಧಿವಿಧಾನಗಳು, ಕಥನಪರಂಪರೆ, ಸಂಗೀತ ಮತ್ತು ನೃತ್ಯಗಳ ಬೆಳವಣಿಗೆಗಳೊಂದಿಗೆ ನಾಟಕ ಮತ್ತು ರಂಗಭೂಮಿಯ ಮೂಲಗಳನ್ನು ಗುರುತಿಸುವ ಪ್ರಯತ್ನಗಳು ನಡೆದಿವೆ. ಹೀಗಾಗಿ ರಂಗಭೂಮಿಯ ಉಗಮವನ್ನು ಒಂದೇ ಒಂದು ಕಾಲಘಟ್ಟ ಅಥವಾ ಭೌಗೋಳಿಕ ಪ್ರದೇಶಕ್ಕೆ ಸೀಮಿತಗೊಳಿಸುವುದು ಕಷ್ಟ.

ರಂಗಭೂಮಿಯ ವೈಶಿಷ್ಟ್ಯವೆಂದರೆ ಅದು ಏಕಮಾಧ್ಯಮದ ಕಲೆ ಅಲ್ಲ. ಸಾಹಿತ್ಯವು ನಾಟಕಕ್ಕೆ ಕಥೆ, ಸಂಭಾಷಣೆ, ಪಾತ್ರ, ಮತ್ತು ವಿಚಾರಗಳನ್ನು ಒದಗಿಸಿದರೆ ಸಂಗೀತವು ಭಾವನಾತ್ಮಕ ವಾತಾವರಣವನ್ನು ಸೃಷ್ಟಿಸುತ್ತದೆ. ಚಿತ್ರಕಲೆ ರಂಗಸ್ಥಳಕ್ಕೆ ದೃಶ್ಯರೂಪವನ್ನು ನೀಡುತ್ತದೆ. ಶಿಲ್ಪ ಮತ್ತು ವಾಸ್ತುಶಿಲ್ಪಗಳು ರಂಗಸಜ್ಜಿಕೆಯ ರೂಪ ಮತ್ತು ವಿನ್ಯಾಸಕ್ಕೆ ನೆರವಾಗುತ್ತವೆ. ವೇಷಭೂಷಣಗಳು ಪಾತ್ರಗಳ ಸಾಮಾಜಿಕ, ಸಾಂಸ್ಕೃತಿಕ ಮತ್ತು ಐತಿಹಾಸಿಕ ಸ್ವರೂಪವನ್ನು ನಿರ್ಧರಿಸುತ್ತವೆ. ಬೆಳಕು ದೃಶ್ಯಾನುಭವವನ್ನು ಗಾಢಗೊಳಿಸುತ್ತದೆ. ನಟನ ದೇಹ ಮತ್ತು ಧ್ವನಿ ಈ ಎಲ್ಲ ಅಂಶಗಳನ್ನು ಜೀವಂತಗೊಳಿಸುತ್ತವೆ.

ಈ ಕಾರಣದಿಂದಲೇ ರಂಗಭೂಮಿಯನ್ನು ಸಾಹಿತ್ಯ, ಚಿತ್ರಕಲೆ, ಸಂಗೀತ, ನೃತ್ಯ, ವಾಸ್ತುಶಿಲ್ಪ ಮತ್ತು ಅಭಿನಯಗಳ ಸಮನ್ವಯದಿಂದ ರೂಪುಗೊಳ್ಳುವ ಸಮಗ್ರ ಕಲಾಮಾಧ್ಯಮವೆಂದು ಪರಿಗಣಿಸಬಹುದು. ಈ ಸಮನ್ವಯದಲ್ಲಿ ಸಾಹಿತ್ಯ ಮತ್ತು ಚಿತ್ರಕಲೆಯ ಸಂಬಂಧ ಅತ್ಯಂತ ಮಹತ್ವದ್ದಾಗಿದೆ. ಕನ್ನಡ ರಂಗಭೂಮಿಯ ಬೆಳವಣಿಗೆಯನ್ನು ಅಧ್ಯಯನ ಮಾಡುವಾಗಲೂ ಸಾಹಿತ್ಯ ಮತ್ತು ಚಿತ್ರಕಲೆಗಳ ಕೊಡುಗೆಯನ್ನು ಪ್ರತ್ಯೇಕವಾಗಿ ನೋಡದೆ ಅವುಗಳ ಪರಸ್ಪರ ಸಂಬಂಧದ ಹಿನ್ನೆಲೆಯಲ್ಲಿ ಪರಿಶೀಲಿಸುವುದು ಅಗತ್ಯ.

**Keywords:** ರಂಗಭೂಮಿ, ಸಾಹಿತ್ಯ, ಚಿತ್ರಕಲೆ, ರಂಗಸಜ್ಜಿಕೆ, ನಾಟಕ, ದೃಶ್ಯಕಲೆ, ಕನ್ನಡ ರಂಗಭೂಮಿ, ನಾಟ್ಯಶಾಸ್ತ್ರ, ರಂಗವಿನ್ಯಾಸ, ಸೌಂದರ್ಯಶಾಸ್ತ್ರ.

**ಪ್ರಸ್ತಾವನೆ:**

ನಾಟಕವು ಸಾಹಿತ್ಯದ ಒಂದು ಪ್ರಮುಖ ಪ್ರಕಾರವಾಗಿದ್ದರೂ ರಂಗಭೂಮಿಯಲ್ಲಿ ನಾಟಕದ ಸಾಹಿತ್ಯಿಕ ಸ್ವರೂಪ ಮಾತ್ರ ಅಂತಿಮವಾಗುವುದಿಲ್ಲ. ನಾಟಕವನ್ನು ಓದಿದಾಗ ದೊರೆಯುವ ಅನುಭವ ಮತ್ತು ಅದೇ ನಾಟಕವನ್ನು ರಂಗದ ಮೇಲೆ ಕಂಡಾಗ ದೊರೆಯುವ ಅನುಭವಗಳಲ್ಲಿ ವ್ಯತ್ಯಾಸವಿರುತ್ತದೆ. ಬರಹದಲ್ಲಿರುವ ಪಾತ್ರವು ರಂಗದ ಮೇಲೆ ನಟನ ದೇಹವನ್ನು ಪಡೆದುಕೊಳ್ಳುತ್ತದೆ. ಸಂಭಾಷಣೆ ಧ್ವನಿಯನ್ನು ಪಡೆಯುತ್ತದೆ. ಸ್ಥಳವು ದೃಶ್ಯರೂಪ ಪಡೆಯುತ್ತದೆ. ಕಾಲವು

ಚಲನೆಯಾಗಿ ಪರಿವರ್ತಿತವಾಗುತ್ತದೆ. ಹೀಗಾಗಿ ನಾಟಕಕಾರನು ರಚಿಸುವ ಸಾಹಿತ್ಯಿಕ ಪಠ್ಯವು ರಂಗಪ್ರದರ್ಶನಕ್ಕೆ ಒಂದು ಆಧಾರವನ್ನು ಒದಗಿಸುತ್ತದೆ. ನಿರ್ದೇಶಕ, ನಟ, ರಂಗವಿನ್ಯಾಸಕಾರ, ಸಂಗೀತ ನಿರ್ದೇಶಕ, ಬೆಳಕು ವಿನ್ಯಾಸಕಾರ ಮತ್ತು ಇತರ ಕಲಾವಿದರು ಆ ಪಠ್ಯವನ್ನು ತಮ್ಮ ತಮ್ಮ ಕಲಾಮಾಧ್ಯಮಗಳ ಮೂಲಕ ಪುನರ್‌ಸೃಷ್ಟಿಸುತ್ತಾರೆ. ಈ ದೃಷ್ಟಿಯಿಂದ ನಾಟಕದ ಸಾಹಿತ್ಯವನ್ನು 'ಮೂಲಪಠ್ಯ'ವೆಂದೂ ರಂಗಪ್ರದರ್ಶನವನ್ನು ಅದರ 'ದೃಶ್ಯ ಮತ್ತು ಕ್ರಿಯಾತ್ಮಕ ರೂಪಾಂತರ'ವೆಂದೂ ಪರಿಗಣಿಸಬಹುದು. ಆದರೆ ರಂಗಪ್ರದರ್ಶನವು ಕೇವಲ ಸಾಹಿತ್ಯದ ಪುನರಾವರ್ತನೆ ಅಲ್ಲ. ಅದು ಸಾಹಿತ್ಯಕ್ಕೆ ಹೊಸ ಅರ್ಥ ಮತ್ತು ಹೊಸ ಅನುಭವವನ್ನು ನೀಡುವ ಸೃಜನಾತ್ಮಕ ಪ್ರಕ್ರಿಯೆಯಾಗಿದೆ. ಕನ್ನಡದಲ್ಲಿ ಪುರಾಣ, ಇತಿಹಾಸ, ಜಾನಪದ, ಸಾಮಾಜಿಕ ಜೀವನ, ರಾಜಕೀಯ, ಮತ್ತು ಆಧುನಿಕ ವಿಚಾರಗಳನ್ನು ಆಧರಿಸಿ ಅನೇಕ ನಾಟಕಗಳು ರಚನೆಯಾಗಿವೆ. ಈ ನಾಟಕಗಳು ರಂಗದ ಮೇಲೆ ಪ್ರದರ್ಶನಗೊಂಡಾಗ ಸಾಹಿತ್ಯವು ದೃಶ್ಯ, ಧ್ವನಿ, ಚಲನೆ ಮತ್ತು ದೇಹಭಾಷೆಯೊಂದಿಗೆ ಸಂಯೋಜಿತವಾಗುತ್ತದೆ.

ಚಿತ್ರಕಲೆ ಮತ್ತು ರಂಗಭೂಮಿಯ ಸಂಬಂಧ ಬಹಳ ಪ್ರಾಚೀನವಾದುದು. ಒಂದು ನಿರ್ದಿಷ್ಟ ಸ್ಥಳವನ್ನು ಮತ್ತೊಂದು ಕಲ್ಪಿತ ಸ್ಥಳವಾಗಿ ಪರಿವರ್ತಿಸುವುದು ರಂಗಭೂಮಿಯ ಮೂಲಭೂತ ಅಗತ್ಯವಾಗಿದೆ. ಅರಣ್ಯ, ಉದ್ಯಾನವನ, ಅರಮನೆ, ಯುದ್ಧಭೂಮಿ, ಸರೋವರ, ದೇವಾಲಯ ಅಥವಾ ನಗರದ ಬೀದಿಯನ್ನು ರಂಗದ ಮೇಲೆ ಸೃಷ್ಟಿಸಬೇಕಾದಾಗ ಚಿತ್ರಕಲೆ ಮತ್ತು ರಂಗವಿನ್ಯಾಸದ ನೆರವು ಅಗತ್ಯವಾಗುತ್ತದೆ. ಪ್ರಾಚೀನ ಮತ್ತು ಮಧ್ಯಕಾಲೀನ ನಾಟಕಗಳಲ್ಲಿ ಪರದೆಗಳ ಮೇಲೆ ವಿವಿಧ ದೃಶ್ಯಗಳನ್ನು ಚಿತ್ರಿಸಿ ಬಳಸುವ ಪದ್ಧತಿ ಕಂಡುಬರುತ್ತದೆ. ವಿಶೇಷವಾಗಿ ಪೌರಾಣಿಕ ನಾಟಕಗಳಲ್ಲಿ ಅರಮನೆಗಳು, ಉದ್ಯಾನಗಳು, ಪರ್ವತಗಳು, ಅರಣ್ಯಗಳು, ಸರೋವರಗಳು ಮತ್ತು ಯುದ್ಧಭೂಮಿಗಳನ್ನು ಚಿತ್ರಿಸುವ ಪರದೆಗಳು ಪ್ರೇಕ್ಷಕರ ಕಲ್ಪನೆಯನ್ನು ದೃಶ್ಯರೂಪದಲ್ಲಿ ನಿರ್ದೇಶಿಸುತ್ತಿದ್ದವು. ಇಲ್ಲಿ ಚಿತ್ರಕಲೆ ಕೇವಲ ಅಲಂಕಾರಿಕ ಉದ್ದೇಶವನ್ನು ಮಾತ್ರ ಹೊಂದಿರಲಿಲ್ಲ. ಅದು ನಾಟಕದ ಸ್ಥಳಕಾಲವನ್ನು ಸೂಚಿಸುವ ಸಂಕೇತವಾಗಿತ್ತು. ಒಂದು ಚಿತ್ರಿತ ಹಿನ್ನೆಲೆ ಪ್ರೇಕ್ಷಕರಿಗೆ "ಈ ಘಟನೆ ಎಲ್ಲಿ ನಡೆಯುತ್ತಿದೆ?" ಎಂಬ ಪ್ರಶ್ನೆಗೆ ತಕ್ಷಣ ಉತ್ತರ ನೀಡುತ್ತಿತ್ತು. ಹೀಗಾಗಿ ರಂಗಚಿತ್ರವು ನಾಟಕದ ಕಥನದ ಒಂದು ಭಾಗವಾಗುತ್ತಿತ್ತು.

ರಂಗಭೂಮಿಯಲ್ಲಿ ಬಳಸುವ ಪರಿಕರಗಳ ಸಮೂಹವನ್ನು ರಂಗಸಜ್ಜಿಕೆ ಎಂದು ಕರೆಯಬಹುದು. ಆದರೆ ರಂಗಸಜ್ಜಿಕೆ ಎಂದರೆ ಕೇವಲ ಕೆಲವು ವಸ್ತುಗಳನ್ನು ರಂಗದ ಮೇಲೆ ಇಡುವುದಲ್ಲ. ಒಂದು ಸಾಮಾನ್ಯ ಸ್ಥಳವನ್ನು ನಿರ್ದಿಷ್ಟ ನಾಟಕೀಯ ಸಂದರ್ಭಕ್ಕೆ ತಕ್ಕ ರಂಗಸ್ಥಳವನ್ನಾಗಿ ಪರಿವರ್ತಿಸುವ ಸೃಜನಾತ್ಮಕ ಯೋಜನೆಯೇ ರಂಗವಿನ್ಯಾಸ. ನಟ ಮತ್ತು ಪ್ರೇಕ್ಷಕರು ಸೇರಿ ಒಂದು ಸಾಮಾನ್ಯ ಸ್ಥಳಕ್ಕೆ ನಾಟಕೀಯ ಅರ್ಥವನ್ನು ನೀಡುತ್ತಾರೆ. ಆ ಸ್ಥಳವನ್ನು ರೂಪಿಸುವಲ್ಲಿ ಹಿನ್ನೆಲೆ, ಪರದೆ, ಪೀಠೋಪಕರಣ, ಬಾಗಿಲು, ಕಿಟಕಿ, ಮೆಟ್ಟಿಲು, ವಸ್ತುಗಳು, ಬೆಳಕು ಮತ್ತು ಬಣ್ಣಗಳ ವಿನ್ಯಾಸ ಪ್ರಮುಖ ಪಾತ್ರ ವಹಿಸುತ್ತವೆ. ಈ ಹಿನ್ನೆಲೆಯಲ್ಲಿ ಚಿತ್ರಕಲೆ ರಂಗವಿನ್ಯಾಸದ ಮೂಲಭೂತ ಆಧಾರಗಳಲ್ಲಿ ಒಂದಾಗಿದೆ. ಬಣ್ಣಗಳ ಆಯ್ಕೆ, ಆಕಾರಗಳ ವಿನ್ಯಾಸ, ದೃಶ್ಯಗಳ ಸಂಯೋಜನೆ, ಬೆಳಕು ಮತ್ತು ನೆರಳಿನ ಬಳಕೆ, ಸ್ಥಳದ ಆಳ ಮತ್ತು ದೃಶ್ಯಸಮತೋಲನ ಇವೆಲ್ಲವೂ ಚಿತ್ರಕಲೆಯ ತತ್ವಗಳೊಂದಿಗೆ ಸಂಬಂಧ ಹೊಂದಿವೆ. ಹೀಗಾಗಿ ರಂಗಸಜ್ಜಿಕೆಯನ್ನು ಒಂದು ರೀತಿಯಲ್ಲಿ 'ಚಲನಶೀಲ ಚಿತ್ರಕಲೆ' ಎಂದು ಪರಿಗಣಿಸಬಹುದು. ಕ್ಯಾನ್ವಾಸಿನ ಮೇಲೆ ಚಿತ್ರಕಾರನು ಸ್ಥಿರ ದೃಶ್ಯವನ್ನು ಸೃಷ್ಟಿಸಿದರೆ ರಂಗವಿನ್ಯಾಸಕಾರನು ಅದೇ ದೃಶ್ಯವನ್ನು ನಟರ ಚಲನೆ, ಬೆಳಕು, ಧ್ವನಿ ಮತ್ತು ಕಾಲದೊಂದಿಗೆ ನಿರಂತರವಾಗಿ ಬದಲಾಗುವ ರೂಪದಲ್ಲಿ ನಿರ್ಮಿಸುತ್ತಾನೆ.

ರಂಗಭೂಮಿಯ ಆರಂಭಿಕ ಹಂತಗಳಲ್ಲಿ ಪೌರಾಣಿಕ ನಾಟಕಗಳು ಮಹತ್ವದ ಸ್ಥಾನ ಪಡೆದಿದ್ದವು. ಪೌರಾಣಿಕ ಕಥೆಗಳು ಪ್ರೇಕ್ಷಕರಿಗೆ ಪರಿಚಿತವಾಗಿದ್ದರೂ ಅವುಗಳನ್ನು ರಂಗದ ಮೇಲೆ ದೃಶ್ಯರೂಪದಲ್ಲಿ ಮಂಡಿಸುವಾಗ ಕಲಾತ್ಮಕ ಹಿನ್ನೆಲೆ ಅಗತ್ಯವಾಗುತ್ತಿತ್ತು. ರಾಮಾಯಣ ಮತ್ತು ಮಹಾಭಾರತದಂತಹ ಮಹಾಕಾವ್ಯಗಳ ಘಟನೆಗಳನ್ನು ಆಧರಿಸಿದ ನಾಟಕಗಳಲ್ಲಿ ಅಯೋಧ್ಯೆ, ಹಸ್ತಿನಾಪುರ, ಅರಣ್ಯ, ಲಂಕೆ, ರಾಜಸಭೆ, ಆಶ್ರಮ ಮತ್ತು ಯುದ್ಧಭೂಮಿಗಳಂತಹ ಸ್ಥಳಗಳನ್ನು ದೃಶ್ಯರೂಪದಲ್ಲಿ ನಿರ್ಮಿಸಬೇಕಾಗುತ್ತಿತ್ತು. ಚಿತ್ರಿತ ಪರದೆಗಳು ಈ ಕಾರ್ಯವನ್ನು ಸುಲಭಗೊಳಿಸುತ್ತಿದ್ದವು. ಇಂತಹ ಚಿತ್ರಗಳು ಪ್ರೇಕ್ಷಕರ ಕಲ್ಪನೆಯನ್ನು ನಿಯಂತ್ರಿಸುವುದರ ಜೊತೆಗೆ ನಾಟಕದ ವಾತಾವರಣವನ್ನು ನಿರ್ಮಿಸುತ್ತಿದ್ದವು. ಉದಾಹರಣೆಗೆ ಅರಣ್ಯದ ದೃಶ್ಯವನ್ನು ನಿರ್ಮಿಸಲು ಮರಗಳು, ಬೆಟ್ಟಗಳು ಮತ್ತು ಹಸಿರು ಹಿನ್ನೆಲೆಯನ್ನು ಬಳಸಬಹುದು. ಯುದ್ಧದ ದೃಶ್ಯಕ್ಕೆ ಕೋಟೆ, ಶಸ್ತ್ರಾಸ್ತ್ರಗಳು ಮತ್ತು ಯುದ್ಧಭೂಮಿಯ ಚಿತ್ರಣವನ್ನು ಬಳಸಬಹುದು. ಹೀಗಾಗಿ ಚಿತ್ರಕಲೆ ನಾಟಕದ ದೃಶ್ಯಭಾಷೆಯ ಪ್ರಮುಖ ಅಂಶವಾಗಿ ರೂಪುಗೊಂಡಿತು.

ಭಾರತೀಯ ರಂಗಭೂಮಿಯ ಇತಿಹಾಸದಲ್ಲಿ ಸಂಸ್ಕೃತ ನಾಟಕಗಳ ಸ್ಥಾನ ಅತ್ಯಂತ ಮಹತ್ವದ್ದಾಗಿದೆ. ಭರತನ ನಾಟ್ಯಶಾಸ್ತ್ರ ಭಾರತೀಯ ನಾಟಕ ಮತ್ತು ರಂಗಭೂಮಿಯ ಕುರಿತು ದೊರೆಯುವ ಪ್ರಮುಖ ಶಾಸ್ತ್ರೀಯ ಗ್ರಂಥವಾಗಿದೆ. ಇದರಲ್ಲಿ ಅಭಿನಯ, ರಸ, ಭಾವ, ರಂಗಸ್ಥಳ, ವೇಷಭೂಷಣ, ಸಂಗೀತ ಮತ್ತು ವಿವಿಧ ರಂಗತಂತ್ರಗಳ ಕುರಿತು ವಿಶದವಾದ ಚರ್ಚೆ ಕಂಡುಬರುತ್ತದೆ. ಸಂಸ್ಕೃತ ನಾಟಕಗಳಲ್ಲಿ ಸ್ಥಳವನ್ನು ಸೂಚಿಸಲು ಸಂಕೇತಾತ್ಮಕ ವಿಧಾನಗಳಿಗೆ ಹೆಚ್ಚಿನ ಮಹತ್ವ ನೀಡಲಾಗುತ್ತಿತ್ತು. ಇಂದಿನ ವಾಸ್ತವಿಕ ರಂಗಸಜ್ಜಿಕೆಯಂತೆ ಪ್ರತಿಯೊಂದು ಸ್ಥಳವನ್ನೂ ನೈಜ ರೂಪದಲ್ಲಿ ನಿರ್ಮಿಸುವ ಅಗತ್ಯ ಇರಲಿಲ್ಲ. ಕೆಲವು ನಿರ್ದಿಷ್ಟ ಪರಿಕರಗಳು ಅಥವಾ ನಟನ ಅಭಿನಯದ ಮೂಲಕವೇ ಸ್ಥಳ ಮತ್ತು ಸಂದರ್ಭವನ್ನು ಸೂಚಿಸಬಹುದಾಗಿತ್ತು. ಈ ಹಿನ್ನೆಲೆಯಲ್ಲಿ ಚಿತ್ರಕಲೆಯ ಪಾತ್ರವನ್ನು ಕೇವಲ ವಾಸ್ತವಿಕ ದೃಶ್ಯ ನಿರ್ಮಾಣಕ್ಕೆ ಸೀಮಿತಗೊಳಿಸಬಾರದು. ಭಾರತೀಯ ರಂಗಪರಂಪರೆಯಲ್ಲಿ ದೃಶ್ಯಸಂಕೇತಗಳು, ಬಣ್ಣಗಳು, ವೇಷಭೂಷಣಗಳು ಮತ್ತು ಅಲಂಕಾರಗಳು ನಾಟಕದ ಅರ್ಥವನ್ನು ರೂಪಿಸುವಲ್ಲಿ ಮಹತ್ವದ ಪಾತ್ರ ವಹಿಸಿವೆ.

ಭಾರತೀಯ ರಂಗಭೂಮಿಯ ವಿಶಿಷ್ಟ ತಂತ್ರಗಳಲ್ಲಿ 'ಕಕ್ಷಾ ವಿಭಾಗ'ವನ್ನು ಉಲ್ಲೇಖಿಸಬಹುದು. ರಂಗದ ವಿವಿಧ ಭಾಗಗಳನ್ನು ವಿಭಿನ್ನ ಸ್ಥಳಗಳಾಗಿ ಕಲ್ಪಿಸಿಕೊಂಡು ಬೇರೆ ಬೇರೆ ಘಟನೆಗಳು ನಡೆಯುವಂತೆ ತೋರಿಸುವ ಈ ವಿಧಾನವು ಭಾರತೀಯ ನಾಟಕದ ಸ್ಥಳಕಲ್ಪನೆಯ ವೈಶಿಷ್ಟ್ಯವನ್ನು ತೋರಿಸುತ್ತದೆ. ಇದನ್ನು ಪಾಶ್ಚಾತ್ಯ ನಾಟಕದ ಕೆಲವು ಶಾಸ್ತ್ರೀಯ ಸಿದ್ಧಾಂತಗಳೊಂದಿಗೆ ಹೋಲಿಕೆ ಮಾಡಬಹುದು. ಅರಿಸ್ಟಾಟಲ್‌ನ ಪೊಯೆಟಿಕ್ಸ್‌ನಲ್ಲಿ ಕ್ರಿಯೆಯ ಏಕತೆಯ ಕುರಿತು ಚರ್ಚೆ ಕಂಡುಬರುತ್ತದೆ. ನಂತರದ ನಾಟಕಸಿದ್ಧಾಂತಗಳಲ್ಲಿ ಕ್ರಿಯೆ, ಸ್ಥಳ ಮತ್ತು ಕಾಲದ ಏಕತೆಯನ್ನು 'ಮೂರು ಐಕ್ಯಗಳು' ಎಂದು ವಿವರಿಸಲಾಗಿದೆ. ಅಂದರೆ ಒಂದೇ ರಂಗಸ್ಥಳದಲ್ಲಿ ವಿವಿಧ ಸ್ಥಳಗಳನ್ನು ಕಲ್ಪಿಸಿಕೊಳ್ಳುವ ಅವಕಾಶವಿದೆ. ಈ ವಿಧಾನವು ಪ್ರೇಕ್ಷಕರ ಕಲ್ಪನಾಶಕ್ತಿಗೆ ಹೆಚ್ಚಿನ ಅವಕಾಶ ನೀಡುತ್ತದೆ. ಈ ಹಿನ್ನೆಲೆಯಲ್ಲಿ ಅಜಂತಾ ಗುಹೆಗಳಲ್ಲಿರುವ ಕೆಲವು ಚಿತ್ರಗಳಲ್ಲಿ ಒಂದೇ ಚಿತ್ರಪಟದೊಳಗೆ ಕಥೆಯ ವಿವಿಧ ಹಂತಗಳನ್ನು ಒಟ್ಟಿಗೆ ನಿರೂಪಿಸಿರುವುದನ್ನು ಕಾಣಬಹುದು. ಈ ದೃಶ್ಯನಿರೂಪಣಾ ವಿಧಾನವನ್ನು ಭಾರತೀಯ ಕಥನ ಮತ್ತು ರಂಗಪರಂಪರೆಯ ಸ್ಥಳಕಾಲದ ಕಲ್ಪನೆಯೊಂದಿಗೆ ಸಂಬಂಧಿಸಿ ಅಧ್ಯಯನ ಮಾಡಬಹುದಾಗಿದೆ.

ಸಾಹಿತ್ಯ ಮತ್ತು ಚಿತ್ರಕಲೆ ಪರಸ್ಪರ ಪ್ರೇರಣೆ ನೀಡುವ ಎರಡು ಕಲಾಮಾಧ್ಯಮಗಳು. ಸಾಹಿತ್ಯವು ಚಿತ್ರಕಾರನಿಗೆ ಕಥೆ, ಪಾತ್ರ, ಸನ್ನಿವೇಶ ಮತ್ತು ಭಾವವನ್ನು ನೀಡುತ್ತದೆ. ಚಿತ್ರಕಲೆ ಸಾಹಿತ್ಯದ ಕಲ್ಪನೆಯನ್ನು ದೃಶ್ಯರೂಪದಲ್ಲಿ ವ್ಯಕ್ತಪಡಿಸುತ್ತದೆ. ಈ ಸಂಬಂಧವನ್ನು 'ದೃಶ್ಯೀಕರಣ' ಎಂಬ ಪರಿಕಲ್ಪನೆಯ ಮೂಲಕ ಅರ್ಥಮಾಡಿಕೊಳ್ಳಬಹುದು.

ಸಾಹಿತ್ಯದಲ್ಲಿ ಪದಗಳ ಮೂಲಕ ನಿರ್ಮಾಣವಾಗುವ ದೃಶ್ಯವು ಚಿತ್ರಕಲೆಯಲ್ಲಿ ಬಣ್ಣ, ರೇಖೆ ಮತ್ತು ಆಕಾರಗಳ ಮೂಲಕ ವ್ಯಕ್ತವಾಗುತ್ತದೆ. ಅದೇ ರೀತಿ ಚಿತ್ರಕಲೆಯ ದೃಶ್ಯಾನುಭವವು ನಾಟಕಕಾರನಿಗೆ ಹೊಸ ಕಥಾ ಅಥವಾ ನಾಟಕೀಯ ಕಲ್ಪನೆಗೆ ಪ್ರೇರಣೆಯಾಗಬಹುದು. ಕಾಳಿದಾಸನ ಶಾಕುಂತಲ ನಾಟಕವನ್ನು ಆಧರಿಸಿ ಅನೇಕ ಚಿತ್ರಕೃತಿಗಳು ರಚನೆಯಾಗಿರುವುದು ಇದಕ್ಕೆ ಉತ್ತಮ ಉದಾಹರಣೆ. ಶಕುಂತಲೆ ದುಷ್ಯಂತನಿಗೆ ವಿರಹಭರಿತವಾಗಿ ಪತ್ರ ಬರೆಯುತ್ತಿರುವ ಸಂದರ್ಭದಲ್ಲಿ ಅವಳ ಸ್ನೇಹಿತೆಯರಾದ ಅನಸೂಯೆ ಮತ್ತು ಪ್ರಿಯಂವದೆ ಕುತೂಹಲದಿಂದ ನೋಡುವ ದೃಶ್ಯವನ್ನು ಎಸ್.ಎಂ. ಪಂಡಿತ್ ಅವರು ಚಿತ್ರರೂಪದಲ್ಲಿ ಮೂಡಿಸಿರುವುದು ಸಾಹಿತ್ಯ ಮತ್ತು ಚಿತ್ರಕಲೆಯ ಅಂತರ್‌ಸಂಬಂಧವನ್ನು ಸ್ಪಷ್ಟಪಡಿಸುತ್ತದೆ. ಇಲ್ಲಿ ಮೂಲ ನಾಟಕದ ಒಂದು ಸನ್ನಿವೇಶ ಚಿತ್ರಕಲೆಯ ಸ್ವತಂತ್ರ ಕಲಾಕೃತಿಯಾಗಿ ರೂಪಾಂತರಗೊಳ್ಳುತ್ತದೆ. ನಾಟಕದ ಕಾಲ, ಪಾತ್ರ ಮತ್ತು ಭಾವನೆಗಳನ್ನು ಒಂದು ಸ್ಥಿರ ದೃಶ್ಯದಲ್ಲಿ ಹಿಡಿದಿಡುವ ಪ್ರಯತ್ನವನ್ನು ಚಿತ್ರಕಾರ ಮಾಡುತ್ತಾನೆ.

ಸಾಹಿತ್ಯ ಮತ್ತು ಚಿತ್ರಕಲೆಯ ಸಂಬಂಧವನ್ನು ಪಾಶ್ಚಾತ್ಯ ರಂಗಭೂಮಿಯ ಸಂದರ್ಭದಲ್ಲಿಯೂ ಕಾಣಬಹುದು. ಶೇಕ್ಸ್ಪಿಯರ್‌ನ ಕಾಲದ ರಂಗಭೂಮಿ ಹೇಗಿತ್ತು ಎಂಬುದನ್ನು ಅರ್ಥಮಾಡಿಕೊಳ್ಳಲು ಆ ಕಾಲದಲ್ಲಿ ರಚಿಸಲಾದ ರೇಖಾಚಿತ್ರಗಳು ಮತ್ತು ಇತರ ದೃಶ್ಯ ದಾಖಲೆಗಳು ಮಹತ್ವದ ಮೂಲಗಳಾಗಿವೆ. ಇದು ರಂಗಭೂಮಿಯ ಇತಿಹಾಸ ಬರೆಯುವಾಗ ದೃಶ್ಯಕಲೆಯ ಮೂಲಗಳ ಮಹತ್ವವನ್ನು ತೋರಿಸುತ್ತದೆ. ನಾಟಕಗಳ ಪಠ್ಯಗಳು ನಮಗೆ ಕಥೆ, ಪಾತ್ರ ಮತ್ತು ಸಂಭಾಷಣೆಯನ್ನು ನೀಡುತ್ತವೆ. ಆದರೆ ರಂಗಸ್ಥಳದ ವಿನ್ಯಾಸ, ಪ್ರೇಕ್ಷಕರ ಕುಳಿತುಕೊಳ್ಳುವ ವಿಧಾನ, ನಟರ ಸ್ಥಾನ ಮತ್ತು ರಂಗದ ವಾಸ್ತು ವಿನ್ಯಾಸದ ಕುರಿತು ಚಿತ್ರಗಳು ಹೆಚ್ಚಿನ ದೃಶ್ಯ ಸಾಕ್ಷ್ಯಗಳನ್ನು ಒದಗಿಸಬಲ್ಲವು. ಹೀಗಾಗಿ ರಂಗಭೂಮಿಯ ಇತಿಹಾಸವು ಕೇವಲ ನಾಟಕಕಾರರು ಮತ್ತು ನಾಟಕಗಳ ಇತಿಹಾಸವಲ್ಲ. ಅದು ದೃಶ್ಯಕಲೆ, ವಾಸ್ತುಶಿಲ್ಪ, ವೇಷಭೂಷಣ ಮತ್ತು ರಂಗತಂತ್ರಗಳ ಇತಿಹಾಸವೂ ಆಗಿದೆ.

ಕನ್ನಡ ರಂಗಭೂಮಿಯ ಬೆಳವಣಿಗೆಯಲ್ಲಿಯೂ ಚಿತ್ರಕಲೆಯ ಪಾತ್ರವನ್ನು ವಿವಿಧ ಹಂತಗಳಲ್ಲಿ ಗುರುತಿಸಬಹುದು. ಪೌರಾಣಿಕ ಮತ್ತು ಐತಿಹಾಸಿಕ ನಾಟಕಗಳ ಹಿನ್ನೆಲೆ ಪರದೆಗಳಿಂದ ಹಿಡಿದು ಆಧುನಿಕ ನಾಟಕಗಳ ಕನಿಷ್ಠ ರಂಗವಿನ್ಯಾಸದವರೆಗೆ ಚಿತ್ರಕಲೆಯ ಪ್ರಭಾವ ಕಂಡುಬರುತ್ತದೆ. ಆಧುನಿಕ ರಂಗಭೂಮಿಯಲ್ಲಿ ವಾಸ್ತವಿಕ ಹಿನ್ನೆಲೆಯ ಬದಲು ಸಂಕೇತಾತ್ಮಕ ರಂಗಸಜ್ಜಿಕೆಗೆ ಹೆಚ್ಚಿನ ಮಹತ್ವ ದೊರೆತಿದೆ. ಕೆಲವೊಮ್ಮೆ ಒಂದು ಕುರ್ಚಿ, ಒಂದು ಬಾಗಿಲು, ಒಂದು ಕಂಬ ಅಥವಾ ನಿರ್ದಿಷ್ಟ ಬಣ್ಣದ ಬೆಳಕು ಇಡೀ ಸ್ಥಳದ ಅರ್ಥವನ್ನು ಸೂಚಿಸಬಲ್ಲದು. ಇದರಿಂದ ಚಿತ್ರಕಲೆಯು ರಂಗಭೂಮಿಯಲ್ಲಿ ತನ್ನ ಸ್ವರೂಪವನ್ನು ಬದಲಿಸಿಕೊಂಡಿದೆ. ಅದು ಕೇವಲ ಪರದೆಯ ಮೇಲಿನ ಚಿತ್ರವಾಗಿ ಉಳಿಯದೆ ಬಣ್ಣ, ರೇಖೆ, ಆಕಾರ, ಬೆಳಕು, ವಸ್ತು ಮತ್ತು ಖಾಲಿ ಜಾಗಗಳ ವಿನ್ಯಾಸವಾಗಿ ರೂಪಾಂತರಗೊಂಡಿದೆ.

ಚಿತ್ರಕಲೆಯ ಪ್ರಭಾವ ರಂಗಸಜ್ಜಿಕೆಗೆ ಮಾತ್ರ ಸೀಮಿತವಾಗಿಲ್ಲ. ವೇಷಭೂಷಣಗಳ ವಿನ್ಯಾಸದಲ್ಲಿಯೂ ಅದು ಪ್ರಮುಖ ಪಾತ್ರ ವಹಿಸುತ್ತದೆ. ಪಾತ್ರದ ಕಾಲಘಟ್ಟ, ಸಾಮಾಜಿಕ ಸ್ಥಾನ, ವೃತ್ತಿ, ಮನೋಭಾವ ಮತ್ತು ಸಾಂಸ್ಕೃತಿಕ ಹಿನ್ನೆಲೆಯನ್ನು ವೇಷಭೂಷಣದ ಬಣ್ಣ ಮತ್ತು ವಿನ್ಯಾಸಗಳ ಮೂಲಕ ವ್ಯಕ್ತಪಡಿಸಬಹುದು. ಅದೇ ರೀತಿ ಮುಖವಾಡಗಳ ತಯಾರಿಕೆಯಲ್ಲಿಯೂ ಚಿತ್ರಕಲೆಯ ಪಾತ್ರ ಮಹತ್ವದ್ದಾಗಿದೆ. ಮುಖದ ಆಕಾರ, ಕಣ್ಣುಗಳ ವಿನ್ಯಾಸ, ಬಣ್ಣ, ರೇಖೆಗಳು ಮತ್ತು ಅಲಂಕಾರಗಳು ಪಾತ್ರದ ಸ್ವಭಾವವನ್ನು ಸೂಚಿಸುತ್ತವೆ. ಜಾನಪದ ರಂಗಭೂಮಿಯ ವಿವಿಧ ರೂಪಗಳಲ್ಲಿ ಮುಖವಾಡ ಮತ್ತು ವೇಷಭೂಷಣಗಳು ಪಾತ್ರದ ಅತಿರೇಕಿತ ಸ್ವರೂಪವನ್ನು ನಿರ್ಮಿಸುವಲ್ಲಿ ನೆರವಾಗುತ್ತವೆ. ಈ ದೃಷ್ಟಿಯಿಂದ ಚಿತ್ರಕಲೆ ಮತ್ತು ರಂಗಭೂಮಿ ಪರಸ್ಪರ ಪೂರಕ ಕಲಾಮಾಧ್ಯಮಗಳಾಗಿವೆ.

ಚಿತ್ರಕಲೆಯ ಇನ್ನೊಂದು ಪ್ರಮುಖ ಬಳಕೆ ನಾಟಕದ ಪ್ರಚಾರದಲ್ಲಿದೆ. ನಾಟಕ ಪ್ರದರ್ಶನಗೊಳ್ಳುವ ಸ್ಥಳದ ಸುತ್ತಮುತ್ತ ಭಿತ್ತಿಚಿತ್ರಗಳು, ಪೋಸ್ಟರ್‌ಗಳು ಮತ್ತು ದೃಶ್ಯಪ್ರಚಾರ ಸಾಮಗ್ರಿಗಳನ್ನು ಬಳಸುವ ಪರಂಪರೆ ಇತ್ತು. ಒಂದು ನಾಟಕದ ಪಾತ್ರವನ್ನು ಅಥವಾ ಪ್ರಮುಖ ಸನ್ನಿವೇಶವನ್ನು ದೃಶ್ಯರೂಪದಲ್ಲಿ ಪ್ರದರ್ಶಿಸುವ ಪೋಸ್ಟರ್ ಪ್ರೇಕ್ಷಕರಲ್ಲಿ ಕುತೂಹಲ ಮೂಡಿಸುತ್ತಿತ್ತು. ಹೀಗಾಗಿ ಚಿತ್ರಕಲೆ ನಾಟಕದ ಪ್ರದರ್ಶನದೊಳಗೆ ಮಾತ್ರವಲ್ಲದೆ ಅದರ ಸುತ್ತಲಿನ ಸಾಂಸ್ಕೃತಿಕ ವಾತಾವರಣ ನಿರ್ಮಾಣದಲ್ಲಿಯೂ ಭಾಗವಹಿಸಿದೆ. ಇಂದಿನ ಡಿಜಿಟಲ್ ಯುಗದಲ್ಲಿ ಪೋಸ್ಟರ್ ವಿನ್ಯಾಸ, ಡಿಜಿಟಲ್ ಗ್ರಾಫಿಕ್ಸ್, ಸಾಮಾಜಿಕ ಮಾಧ್ಯಮಗಳ ದೃಶ್ಯಪ್ರಚಾರ ಮತ್ತು ವೀಡಿಯೊ ವಿನ್ಯಾಸಗಳು ಇದೇ ಪರಂಪರೆಯ ಆಧುನಿಕ ರೂಪಗಳಾಗಿವೆ.

ರಂಗಭೂಮಿ ಮತ್ತು ಚಿತ್ರಕಲೆಯ ಸಂಬಂಧವನ್ನು ಅತ್ಯಂತ ಪರಿಣಾಮಕಾರಿಯಾಗಿ ತೋರಿಸುವ ಉದಾಹರಣೆಗಳಲ್ಲಿ ಚಂದ್ರಶೇಖರ ಕಂಬಾರರ 'ಜೋಕುಮಾರಸ್ವಾಮಿ' ನಾಟಕದ ಪ್ರದರ್ಶನ ಆಗುತ್ತಿರುವ ಸಂದರ್ಭದಲ್ಲಿಯೇ, ಅದನ್ನು ಆಧರಿಸಿ ಹಿರಿಯ ಕಲಾವಿದರಾದ ಆರ್.ಎಂ. ಹಡಪದ್ ಅವರು ಕ್ಯಾನ್ವಾಸಿನ ಮೇಲೆ ಮೂಡಿಸಿದ ಚಿತ್ರಗಳು. ಒಂದು ಕಡೆ ನಾಟಕ ನಡೆಯುತ್ತಿದ್ದರೆ, ಅದೇ ಸಂದರ್ಭದಲ್ಲಿಯೇ, ಮತ್ತೊಂದು ಕಡೆ ಚಿತ್ರರಚನೆ ಮಾಡಿದ್ದು ಗಮನಾರ್ಹವಾಗಿದೆ. ಇಲ್ಲಿ ನಾಟಕದ ಪ್ರದರ್ಶನವೇ ಚಿತ್ರಕಾರನಿಗೆ ಸೃಜನಾತ್ಮಕ ಪ್ರೇರಣೆಯಾಗಿದೆ. ಒಂದು ಕಡೆ ರಂಗದ ಮೇಲೆ ನಾಟಕ ನಡೆಯುತ್ತಿದ್ದರೆ ಮತ್ತೊಂದು ಕಡೆ ಆ ಪ್ರದರ್ಶನದ ಅನುಭವವನ್ನು ಚಿತ್ರಕಾರ ಕ್ಯಾನ್ವಾಸಿನ ಮೇಲೆ ದಾಖಲಿಸುತ್ತಿದ್ದರು. ಹೀಗಾಗಿ ರಂಗಭೂಮಿ ಚಿತ್ರಕಲೆಯ ವಿಷಯವಾಗುವುದಷ್ಟೇ ಅಲ್ಲದೆ ಚಿತ್ರಕಲೆಯ ಸೃಷ್ಟಿಗೆ ನೇರ ಪ್ರೇರಣೆಯಾಗುತ್ತದೆ. ಇದು ಸಾಮಾನ್ಯ 'ನಾಟಕದ ಚಿತ್ರಣ'ಕ್ಕಿಂತ ಭಿನ್ನವಾದ ಕಲಾತ್ಮಕ ಪ್ರಯೋಗವಾಗಿದೆ. ಇಲ್ಲಿ ಚಿತ್ರಕಾರನು ನಾಟಕವನ್ನು ಸ್ಥಿರವಾಗಿ ದಾಖಲಿಸುವ ಬದಲು ಪ್ರದರ್ಶನದ ಕ್ಷಣಿಕ ಅನುಭವವನ್ನು ತನ್ನ ದೃಶ್ಯಭಾಷೆಯ ಮೂಲಕ ಪುನರ್‌ಸೃಷ್ಟಿಸುತ್ತಾನೆ.

ತುಳಸೀದಾಸರ ರಾಮಾಯಣವನ್ನು ಆಧರಿಸಿ ಕೆ. ಕೆ. ಹೆಬ್ಬಾರ್ ಅವರು ರಚಿಸಿದ ಕಥನಾತ್ಮಕ ರೇಖಾಚಿತ್ರಗಳು ಸಾಹಿತ್ಯ ಮತ್ತು ಚಿತ್ರಕಲೆಯ ಕೊಡುಕೊಳೆಗಳ ಮತ್ತೊಂದು ಪ್ರಮುಖ ಉದಾಹರಣೆಯಾಗಿದೆ. ಇಲ್ಲಿ ಸಾಹಿತ್ಯದ ದೀರ್ಘ ಕಥನವನ್ನು ರೇಖೆಯ ಮೂಲಕ ಸಂಕ್ಷಿಪ್ತ ದೃಶ್ಯರೂಪಕ್ಕೆ ತರಲಾಗುತ್ತದೆ. ಸಾಹಿತ್ಯದ ಕಥೆಯನ್ನು ಓದುವಾಗ ಓದುಗನು ತನ್ನ ಕಲ್ಪನೆಯಲ್ಲಿ ಪಾತ್ರಗಳು ಮತ್ತು ಸನ್ನಿವೇಶಗಳನ್ನು ನಿರ್ಮಿಸಿಕೊಳ್ಳುತ್ತಾನೆ. ಚಿತ್ರಕಾರನು ಆ ಕಲ್ಪನೆಗೆ ತನ್ನದೇ ಆದ ದೃಶ್ಯರೂಪವನ್ನು ನೀಡುತ್ತಾನೆ. ಇದರಿಂದ ಒಂದು ಮಹತ್ವದ ಪ್ರಶ್ನೆ ಎದುರಾಗುತ್ತದೆ: ಸಾಹಿತ್ಯದ ದೃಶ್ಯೀಕರಣವು ಮೂಲ ಸಾಹಿತ್ಯದ ಅರ್ಥವನ್ನು ಕಡಿಮೆ ಮಾಡುತ್ತದೆಯೇ ಅಥವಾ ಅದಕ್ಕೆ ಹೊಸ ಅರ್ಥವನ್ನು ನೀಡುತ್ತದೆಯೇ? ವಾಸ್ತವವಾಗಿ ಉತ್ತಮ ಚಿತ್ರಕಲೆ ಸಾಹಿತ್ಯದ ಅರ್ಥವನ್ನು ಕೇವಲ ಪುನರಾವರ್ತಿಸುವುದಿಲ್ಲ. ಅದು ಸಾಹಿತ್ಯದೊಳಗಿನ ಸೂಕ್ಷ್ಮ ಭಾವ, ಸಂಕೇತ ಮತ್ತು ಅರ್ಥಪದರಗಳನ್ನು ತನ್ನದೇ ಆದ ದೃಶ್ಯಭಾಷೆಯಲ್ಲಿ ಪುನರ್‌ವ್ಯಾಖ್ಯಾನಿಸುತ್ತದೆ.

ಸಾಹಿತ್ಯ, ಚಿತ್ರಕಲೆ ಮತ್ತು ರಂಗಭೂಮಿಗಳು ಸ್ವತಂತ್ರವಾದ ಕಲಾಮಾಧ್ಯಮಗಳೆಂದು ಪರಿಗಣಿಸಲ್ಪಟ್ಟರೂ ಅವುಗಳ ಸೃಜನಶೀಲ ಸ್ವರೂಪವನ್ನು ಆಳವಾಗಿ ಪರಿಶೀಲಿಸಿದಾಗ ಅವು ಪರಸ್ಪರ ಅವಲಂಬಿತವಾಗಿರುವುದು ಸ್ಪಷ್ಟವಾಗುತ್ತದೆ. ಸಾಹಿತ್ಯವು ಪದಗಳ ಮೂಲಕ ಅನುಭವವನ್ನು ಕಟ್ಟಿಕೊಟ್ಟರೆ ಚಿತ್ರಕಲೆ ರೇಖೆ, ಬಣ್ಣ, ಆಕಾರ, ಬೆಳಕು ಮತ್ತು ಸಂಯೋಜನೆಯ ಮೂಲಕ ಅದೇ ಅನುಭವಕ್ಕೆ ದೃಶ್ಯರೂಪ ನೀಡುತ್ತದೆ. ರಂಗಭೂಮಿ ಈ ಎರಡನ್ನೂ ಮಾನವ ದೇಹ, ಅಭಿನಯ, ಧ್ವನಿ, ಚಲನೆ, ಸಂಗೀತ, ಬೆಳಕು ಮತ್ತು ಸ್ಥಳಗಳೊಂದಿಗೆ ಸಂಯೋಜಿಸಿ ಜೀವಂತ ಅನುಭವವನ್ನಾಗಿ ಪರಿವರ್ತಿಸುತ್ತದೆ. ಆದ್ದರಿಂದ ಸಾಹಿತ್ಯ, ಚಿತ್ರಕಲೆ ಮತ್ತು ರಂಗಭೂಮಿಯ ಸಂಬಂಧವನ್ನು ಮೂರು ಪ್ರತ್ಯೇಕ ಕಲಾರೂಪಗಳ ಸಂಬಂಧವೆಂದು ನೋಡುವುದಕ್ಕಿಂತ ಪರಸ್ಪರ ಪೂರಕವಾದ ಸೃಜನಾತ್ಮಕ ಸಂಬಂಧವೆಂದು ನೋಡುವುದು ಹೆಚ್ಚು ಸೂಕ್ತ.

ಈ ಮೂರು ಕಲಾಮಾಧ್ಯಮಗಳ ನಡುವಿನ ಸಂಬಂಧವು ಏಕಮುಖವಾದುದಲ್ಲ. ಸಾಹಿತ್ಯವು ರಂಗಭೂಮಿಗೆ ತನ್ನ ಕಥನ ಮತ್ತು ವಿಚಾರಗಳನ್ನು ನೀಡುತ್ತದೆ. ಚಿತ್ರಕಲೆ ರಂಗಭೂಮಿಗೆ ದೃಶ್ಯಭಾಷೆಯನ್ನು ಒದಗಿಸುತ್ತದೆ. ಅದೇ ಸಂದರ್ಭದಲ್ಲಿ ರಂಗಭೂಮಿಯ ಜೀವಂತ ಅನುಭವ ಚಿತ್ರಕಾರನಿಗೆ ಹೊಸ ದೃಶ್ಯಕಲ್ಪನೆಗಳನ್ನು ನೀಡುತ್ತದೆ. ರಂಗಾನುಭವವೇ ನಾಟಕಕಾರನಿಗೆ ಹೊಸ ಸಾಹಿತ್ಯಿಕ ಸೃಷ್ಟಿಗೆ ಪ್ರೇರಣೆಯಾಗುತ್ತದೆ. ಹೀಗಾಗಿ ಇಲ್ಲಿ ನಿರಂತರವಾದ ಕೊಡುಕೊಳೆ ನಡೆಯುತ್ತಿರುತ್ತದೆ.

ಸಾಹಿತ್ಯ ಮತ್ತು ರಂಗಭೂಮಿಯ ಸಂಬಂಧ ಅತ್ಯಂತ ಆಂತರಿಕವಾದುದು. ವಿಶೇಷವಾಗಿ ನಾಟಕವು ಸಾಹಿತ್ಯ ಮತ್ತು ಪ್ರದರ್ಶನದ ನಡುವಿನ ಸೇತುವೆಯಾಗಿದೆ. ನಾಟಕಕಾರನು ರಚಿಸುವ ಪಠ್ಯದಲ್ಲಿ ಕಥಾವಸ್ತು, ಪಾತ್ರಗಳು, ಸಂಭಾಷಣೆ, ಸಂಘರ್ಷ, ಭಾವನೆ, ವಿಚಾರ ಮತ್ತು ಸಾಮಾಜಿಕ ಹಿನ್ನೆಲೆಗಳು ಅಡಕವಾಗಿರುತ್ತವೆ. ಆದರೆ ಈ ಎಲ್ಲ ಅಂಶಗಳು ರಂಗದ ಮೇಲೆ ಪ್ರದರ್ಶನಗೊಳ್ಳುವಾಗ ಅವು ಹೊಸ ರೂಪವನ್ನು ಪಡೆದುಕೊಳ್ಳುತ್ತವೆ. ಒಂದು ನಾಟಕವನ್ನು ಓದುವಾಗ ಓದುಗನು ಪಾತ್ರಗಳ ರೂಪ, ಸ್ಥಳ, ವಾತಾವರಣ ಮತ್ತು ಘಟನೆಗಳನ್ನು ತನ್ನ ಕಲ್ಪನೆಯಲ್ಲಿ ನಿರ್ಮಿಸಿಕೊಳ್ಳುತ್ತಾನೆ. ಆದರೆ ಅದೇ ನಾಟಕ ರಂಗದ ಮೇಲೆ ಬಂದಾಗ ಆ ಕಲ್ಪನೆಗಳು ನಟನ ದೇಹ, ಧ್ವನಿ, ವೇಷಭೂಷಣ, ರಂಗಸಜ್ಜಿಕೆ ಮತ್ತು ಬೆಳಕಿನ ಮೂಲಕ ದೃಶ್ಯರೂಪ ಪಡೆಯುತ್ತವೆ. ಹೀಗಾಗಿ ಸಾಹಿತ್ಯವು ರಂಗಭೂಮಿಗೆ ಕೇವಲ ಕಥೆಯನ್ನು ನೀಡುವುದಿಲ್ಲ. ಅದು ರಂಗಪ್ರದರ್ಶನಕ್ಕೆ ಒಂದು ಕಲ್ಪನಾತ್ಮಕ ಮತ್ತು ಭಾವನಾತ್ಮಕ ನೆಲೆಯನ್ನು ಒದಗಿಸುತ್ತದೆ. ನಾಟಕದ ಸಾಹಿತ್ಯಿಕ ಪಠ್ಯವು ಪ್ರದರ್ಶನದ ಮೂಲವಾಗಿದ್ದರೂ ಪ್ರದರ್ಶನವು ಆ ಪಠ್ಯದ ಯಾಂತ್ರಿಕ ಪುನರಾವರ್ತನೆಯಾಗುವುದಿಲ್ಲ. ನಿರ್ದೇಶಕ ಮತ್ತು ನಟರು ತಮ್ಮ ಸೃಜನಶೀಲತೆಯ ಮೂಲಕ ಪಠ್ಯಕ್ಕೆ ಹೊಸ ಅರ್ಥಗಳನ್ನು ನೀಡುತ್ತಾರೆ. ಈ ಪ್ರಕ್ರಿಯೆಯಲ್ಲಿ ಸಾಹಿತ್ಯವು ಸ್ಥಿರ ಪಠ್ಯದಿಂದ ಚಲನಶೀಲ ಅನುಭವವಾಗಿ ಪರಿವರ್ತಿತವಾಗುತ್ತದೆ. ಪದಗಳು ಧ್ವನಿಯಾಗುತ್ತವೆ. ಸಂಭಾಷಣೆ ಅಭಿನಯವಾಗುತ್ತದೆ. ವರ್ಣನೆ ದೃಶ್ಯವಾಗುತ್ತದೆ. ಪಾತ್ರವು ನಟನ ದೇಹವನ್ನು ಪಡೆದುಕೊಳ್ಳುತ್ತದೆ. ಹೀಗಾಗಿ ಸಾಹಿತ್ಯದ ಅಮೂರ್ತ ಕಲ್ಪನೆಗಳು ರಂಗಭೂಮಿಯಲ್ಲಿ ಇಂದ್ರಿಯಗ್ರಾಹ್ಯ ಅನುಭವಗಳಾಗಿ ರೂಪಾಂತರಗೊಳ್ಳುತ್ತವೆ.

ರಂಗಭೂಮಿಯ ಮತ್ತೊಂದು ಪ್ರಮುಖ ಆಯಾಮ ದೃಶ್ಯತೆ. ಪ್ರೇಕ್ಷಕನು ನಾಟಕವನ್ನು ಕೇವಲ ಕೇಳುವುದಿಲ್ಲ. ಅವನು ಅದನ್ನು ನೋಡುತ್ತಾನೆ. ಆದ್ದರಿಂದ ರಂಗಭೂಮಿಯ ದೃಶ್ಯ ವಿನ್ಯಾಸಕ್ಕೆ ಚಿತ್ರಕಲೆಯ ತತ್ವಗಳು ಬಹಳ ಮುಖ್ಯವಾಗುತ್ತವೆ. ಬಣ್ಣ, ರೇಖೆ, ಆಕಾರ, ಬೆಳಕು, ನೆರಳು, ಸಂಯೋಜನೆ, ಪ್ರಮಾಣ, ಸಮತೋಲನ ಮತ್ತು ಸ್ಥಳವಿನ್ಯಾಸಗಳು ಚಿತ್ರಕಲೆಯ ಮೂಲ ಅಂಶಗಳಾಗಿವೆ. ಇದೇ ಅಂಶಗಳು ರಂಗಸಜ್ಜಿಕೆಯಲ್ಲಿಯೂ ಕಾರ್ಯನಿರ್ವಹಿಸುತ್ತವೆ. ಒಂದು ಅರಮನೆಯ ದೃಶ್ಯವನ್ನು ನಿರ್ಮಿಸುವಾಗ ಅದರ ಗೋಡೆ, ಬಾಗಿಲು, ಕಿಟಕಿ, ಕಂಬ, ಪೀಠೋಪಕರಣ ಮತ್ತು ಅಲಂಕಾರಗಳ ವಿನ್ಯಾಸದಲ್ಲಿ ಚಿತ್ರಕಲೆಯ ದೃಶ್ಯಸಂಯೋಜನೆಯ ಪ್ರಭಾವ ಕಂಡುಬರುತ್ತದೆ. ಅದೇ ರೀತಿ ಅರಣ್ಯದ ದೃಶ್ಯವನ್ನು ನಿರ್ಮಿಸುವಾಗ ಬಣ್ಣಗಳ ಆಯ್ಕೆ, ಮರಗಳ ವಿನ್ಯಾಸ, ಬೆಳಕು ಮತ್ತು ನೆರಳಿನ ಬಳಕೆ ರಂಗದ ವಾತಾವರಣವನ್ನು ನಿರ್ಧರಿಸುತ್ತವೆ. ಇಲ್ಲಿ ಚಿತ್ರಕಲೆ ರಂಗಭೂಮಿಯ ಅಲಂಕಾರಿಕ ಅಂಶ ಮಾತ್ರವಲ್ಲ. ಅದು ನಾಟಕದ ಅರ್ಥವನ್ನು ಪ್ರೇಕ್ಷಕರಿಗೆ ತಲುಪಿಸುವ ದೃಶ್ಯಭಾಷೆಯಾಗುತ್ತದೆ. ಒಂದು ನಾಟಕದಲ್ಲಿ ದುಃಖ, ಆತಂಕ ಅಥವಾ ಸಂಘರ್ಷವನ್ನು ಸಂಭಾಷಣೆಯ ಮೂಲಕ ಮಾತ್ರ ವ್ಯಕ್ತಪಡಿಸಬೇಕೆಂದಿಲ್ಲ. ಕತ್ತಲೆಯ ಬೆಳಕು, ನಿರ್ದಿಷ್ಟ ಬಣ್ಣ, ಖಾಲಿ ರಂಗಸ್ಥಳ ಅಥವಾ ಅಸಮತೋಲನದ ದೃಶ್ಯಸಂಯೋಜನೆಯ ಮೂಲಕವೂ ಅದೇ ಭಾವವನ್ನು ವ್ಯಕ್ತಪಡಿಸಬಹುದು. ಹೀಗಾಗಿ ಚಿತ್ರಕಲೆಯ ಭಾಷೆ ರಂಗಭೂಮಿಯ ಭಾವಭಾಷೆಯೊಂದಿಗೆ ಬೆಸೆದುಕೊಳ್ಳುತ್ತದೆ.

ರಂಗಭೂಮಿಯ ಪ್ರಭಾವ ಸಾಹಿತ್ಯದ ಮೇಲೆಯೂ ಇದೆ. ನಾಟಕಕಾರನಿಗೆ ಕಥೆಯು ಕೇವಲ ಪುಸ್ತಕಗಳಿಂದ ಅಥವಾ ಕಲ್ಪನೆಯಿಂದ ಮಾತ್ರ ದೊರೆಯುವುದಿಲ್ಲ. ಬದುಕಿನ ಅನುಭವ, ಸಾಮಾಜಿಕ ಸಂಘರ್ಷ, ಜನಜೀವನ, ಜಾನಪದ ಪರಂಪರೆ ಮತ್ತು ರಂಗಾನುಭವಗಳಿಂದಲೂ ಸಾಹಿತ್ಯ ಹುಟ್ಟಿಕೊಳ್ಳುತ್ತದೆ. ರಂಗದ ಮೇಲೆ ಮಾನವ ಸಂಬಂಧಗಳು ಹೇಗೆ ರೂಪುಗೊಳ್ಳುತ್ತವೆ ಎಂಬುದನ್ನು ನೋಡುವುದು ನಾಟಕಕಾರನಿಗೆ ಹೊಸ ಪಾತ್ರಗಳನ್ನು ಸೃಷ್ಟಿಸಲು ಪ್ರೇರಣೆಯಾಗಬಹುದು. ನಟನ ದೇಹಭಾಷೆ, ಜನರ ಪ್ರತಿಕ್ರಿಯೆ, ರಂಗದ ವಾತಾವರಣ ಮತ್ತು ಪ್ರದರ್ಶನದ ಸಾಮಾಜಿಕ ಪರಿಣಾಮಗಳು ಹೊಸ ನಾಟಕೀಯ ಕಲ್ಪನೆಗಳಿಗೆ ಕಾರಣವಾಗಬಹುದು. ಹೀಗಾಗಿ ಸಾಹಿತ್ಯವು ರಂಗಭೂಮಿಯನ್ನು ನಿರ್ಮಿಸುವುದಷ್ಟೇ ಅಲ್ಲ. ರಂಗಭೂಮಿಯೂ ಸಾಹಿತ್ಯವನ್ನು ಪುನರ್‌ನಿರ್ಮಿಸುತ್ತದೆ. ಒಂದು ಪ್ರದರ್ಶನವು ನಾಟಕದ ಮೂಲಪಠ್ಯವನ್ನು ಹೊಸ ದೃಷ್ಟಿಯಿಂದ ಅರ್ಥಮಾಡಿಕೊಳ್ಳಲು ನಾಟಕಕಾರನಿಗೂ ಪ್ರೇಕ್ಷಕನಿಗೂ ಅವಕಾಶ ನೀಡುತ್ತದೆ.

ಡಿಜಿಟಲ್ ತಂತ್ರಜ್ಞಾನದ ಬೆಳವಣಿಗೆಯಿಂದ ರಂಗಭೂಮಿ ಮತ್ತು ಚಿತ್ರಕಲೆಯ ಸಂಬಂಧ ಹೊಸ ಹಂತಕ್ಕೆ ಪ್ರವೇಶಿಸಿದೆ. ಪ್ರೊಜೆಕ್ಷನ್ ಮ್ಯಾಪಿಂಗ್, ಡಿಜಿಟಲ್ ಹಿನ್ನೆಲೆ, ವೀಡಿಯೊ ವಿನ್ಯಾಸ, ಅನಿಮೇಷನ್, ಎಲ್‌ಇಡಿ ಪರದೆಗಳು ಮತ್ತು ಡಿಜಿಟಲ್ ಬೆಳಕು ತಂತ್ರಜ್ಞಾನಗಳು ರಂಗದ ದೃಶ್ಯಾನುಭವವನ್ನು ವಿಸ್ತರಿಸಿವೆ. ಹಿಂದೆ ಒಂದು ದೃಶ್ಯವನ್ನು ಚಿತ್ರಿತ ಪರದೆಯ ಮೂಲಕ ಸೂಚಿಸಲಾಗುತ್ತಿತ್ತು. ಈಗ ಅದೇ ದೃಶ್ಯವನ್ನು ಚಲಿಸುವ ಚಿತ್ರಗಳು ಮತ್ತು ಡಿಜಿಟಲ್ ಪ್ರಕ್ಷೇಪಣೆಯ ಮೂಲಕ ನಿರ್ಮಿಸಬಹುದು. ಅರಣ್ಯವು ಕೇವಲ ಒಂದು ಚಿತ್ರವಾಗಿರದೆ ಗಾಳಿಯಲ್ಲಿ ಚಲಿಸುವ ಮರಗಳು, ಮಳೆ ಮತ್ತು ಬೆಳಕಿನೊಂದಿಗೆ ಜೀವಂತ ದೃಶ್ಯವಾಗಿ ಕಾಣಿಸಬಹುದು. ಆದರೆ ತಂತ್ರಜ್ಞಾನ ಹೆಚ್ಚಾದಂತೆ ರಂಗಭೂಮಿಯ ಮೂಲಭೂತ ಮಾನವೀಯ ಅಂಶ ಮರೆಯಾಗಬಾರದು. ರಂಗಭೂಮಿಯ ಶಕ್ತಿ ನಟ ಮತ್ತು ಪ್ರೇಕ್ಷಕರ ನೇರ ಸಂವಹನದಲ್ಲಿದೆ. ದೃಶ್ಯತಂತ್ರಜ್ಞಾನವು ಆ ಅನುಭವಕ್ಕೆ ಪೂರಕವಾಗಬೇಕು. ಪರ್ಯಾಯವಾಗಬಾರದು.

ರಂಗಭೂಮಿ, ಸಾಹಿತ್ಯ ಮತ್ತು ಚಿತ್ರಕಲೆಯ ಅಂತರ್‌ಸಂಬಂಧದ ಅಧ್ಯಯನಕ್ಕೆ ಕನ್ನಡದಲ್ಲಿ ಇನ್ನೂ ಅನೇಕ ಸಾಧ್ಯತೆಗಳಿವೆ. ಕನ್ನಡ ರಂಗಭೂಮಿಯ ಇತಿಹಾಸವನ್ನು ಕೇವಲ ನಾಟಕಕಾರರು ಮತ್ತು ನಾಟಕಗಳ ಆಧಾರದ ಮೇಲೆ ಬರೆಯುವುದಕ್ಕಿಂತ ರಂಗಸಜ್ಜಿಕೆ, ಚಿತ್ರಕಲೆ, ವೇಷಭೂಷಣ, ಮುಖವಾಡ, ಪೋಸ್ಟರ್, ಬೆಳಕು ಮತ್ತು ರಂಗವಿನ್ಯಾಸಗಳ ಆಧಾರದಲ್ಲಿಯೂ ದಾಖಲಿಸುವ ಅಗತ್ಯವಿದೆ. ಹಳೆಯ ನಾಟಕಗಳ ಪೋಸ್ಟರ್‌ಗಳು, ರಂಗಚಿತ್ರಗಳು, ಛಾಯಾಚಿತ್ರಗಳು, ವಿನ್ಯಾಸಚಿತ್ರಗಳು ಮತ್ತು ಕಲಾವಿದರ ವೈಯಕ್ತಿಕ ದಾಖಲೆಗಳನ್ನು ಸಂಗ್ರಹಿಸಿ ಅಧ್ಯಯನ ಮಾಡಬಹುದು. ಇದರಿಂದ ಕನ್ನಡ ರಂಗಭೂಮಿಯ ದೃಶ್ಯ ಇತಿಹಾಸವನ್ನು ಪುನರ್‌ನಿರ್ಮಿಸಲು ಸಾಧ್ಯವಾಗುತ್ತದೆ. ಅದೇ ರೀತಿ ನಿರ್ದಿಷ್ಟ ನಾಟಕಕಾರರ ಕೃತಿಗಳನ್ನು ಆಧರಿಸಿ ರಚಿಸಲಾದ ಚಿತ್ರಕೃತಿಗಳ ತೌಲನಿಕ ಅಧ್ಯಯನವನ್ನೂ ನಡೆಸಬಹುದು. ನಾಟಕದ ಮೂಲಪಠ್ಯ ಮತ್ತು ಅದನ್ನು ಆಧರಿಸಿ ರಚಿಸಲಾದ ಚಿತ್ರಕೃತಿಯ ನಡುವೆ ಉಂಟಾಗುವ ಅರ್ಥಾಂತರಗಳನ್ನು ಪರಿಶೀಲಿಸುವುದು ಸಾಹಿತ್ಯ ಮತ್ತು ದೃಶ್ಯಕಲೆಯ ಸಂಬಂಧದ ಹೊಸ ಆಯಾಮಗಳನ್ನು ತೆರೆದಿಡಬಹುದು.

**ಉಪಸಂಹಾರ**

ರಂಗಭೂಮಿಯು ಮೂಲತಃ ಒಂದು ಸಮಗ್ರ ಕಲಾಮಾಧ್ಯಮ. ಅದರ ಸೃಷ್ಟಿಯಲ್ಲಿ ಸಾಹಿತ್ಯ, ಚಿತ್ರಕಲೆ, ಸಂಗೀತ, ನೃತ್ಯ, ವೇಷಭೂಷಣ, ಶಿಲ್ಪ, ವಾಸ್ತುಶಿಲ್ಪ ಮತ್ತು ಬೆಳಕುಗಳೆಲ್ಲವೂ ತಮ್ಮದೇ ಆದ ಪಾತ್ರವನ್ನು ವಹಿಸುತ್ತವೆ. ಇವುಗಳಲ್ಲಿ ಸಾಹಿತ್ಯ ಮತ್ತು ಚಿತ್ರಕಲೆಯ ಸಂಬಂಧ ವಿಶೇಷವಾಗಿ ಆಳವಾದುದು. ಸಾಹಿತ್ಯವು ರಂಗಭೂಮಿಗೆ ಕಥನ ಮತ್ತು ವಿಚಾರವನ್ನು ನೀಡುತ್ತದೆ. ಚಿತ್ರಕಲೆ ಅದಕ್ಕೆ ದೃಶ್ಯರೂಪ ಮತ್ತು ವಿನ್ಯಾಸವನ್ನು ನೀಡುತ್ತದೆ. ರಂಗಭೂಮಿ ಈ ಎರಡನ್ನೂ ನಟನ ದೇಹ, ಧ್ವನಿ, ಚಲನೆ ಮತ್ತು ಕಾಲದೊಂದಿಗೆ ಸಂಯೋಜಿಸಿ ಜೀವಂತ ಅನುಭವವನ್ನಾಗಿ ಪರಿವರ್ತಿಸುತ್ತದೆ.

ಪೌರಾಣಿಕ ನಾಟಕಗಳ ಚಿತ್ರಿತ ಪರದೆಗಳಿಂದ ಹಿಡಿದು ಆಧುನಿಕ ಸಂಕೇತಾತ್ಮಕ ರಂಗವಿನ್ಯಾಸದವರೆಗೆ ಚಿತ್ರಕಲೆಯ ಪ್ರಭಾವ ನಿರಂತರವಾಗಿದೆ. ಕಾಳಿದಾಸನ 'ಶಾಕುಂತಲ' ನಾಟಕವನ್ನು ಆಧರಿಸಿದ ಎಸ್.ಎಂ. ಪಂಡಿತ್ ಅವರ ಕಲಾಕೃತಿ, 'ಜೋಕುಮಾರಸ್ವಾಮಿ' ಪ್ರದರ್ಶನವನ್ನು ಆಧರಿಸಿ ಆರ್.ಎಂ. ಹಡಪದ್ ಅವರು ರಚಿಸಿದ ಚಿತ್ರಗಳು ಮತ್ತು ತುಳಸೀದಾಸರ ರಾಮಾಯಣವನ್ನು ಆಧರಿಸಿ ಕೆ.ಕೆ. ಹೆಬ್ಬಾರ್ ಅವರು ರಚಿಸಿದ ರೇಖಾಚಿತ್ರಗಳು ಸಾಹಿತ್ಯ, ರಂಗಭೂಮಿ ಮತ್ತು ಚಿತ್ರಕಲೆಯ ನಡುವಿನ ಸೃಜನಾತ್ಮಕ ಕೊಡುಕೊಳೆಗಳನ್ನು ಸ್ಪಷ್ಟಪಡಿಸುತ್ತವೆ.

ಹೀಗಾಗಿ ರಂಗಭೂಮಿಯ ಇತಿಹಾಸವನ್ನು ಸಂಪೂರ್ಣವಾಗಿ ಅರ್ಥಮಾಡಿಕೊಳ್ಳಬೇಕಾದರೆ ಅದರ ಸಾಹಿತ್ಯಿಕ ಪಠ್ಯಗಳ ಜೊತೆಗೆ ಅದರ ದೃಶ್ಯಪಠ್ಯವನ್ನೂ ಅಧ್ಯಯನ ಮಾಡಬೇಕು. ರಂಗಸಜ್ಜಿಕೆ, ರಂಗವಿನ್ಯಾಸ, ವೇಷಭೂಷಣ, ಮುಖವಾಡ, ಪೋಸ್ಟರ್, ಚಿತ್ರಕೃತಿ ಮತ್ತು ಛಾಯಾಚಿತ್ರಗಳೆಲ್ಲವೂ ರಂಗಭೂಮಿಯ ಸಾಂಸ್ಕೃತಿಕ ಸ್ಮೃತಿಯ ಭಾಗಗಳಾಗಿವೆ. ಅಂತಿಮವಾಗಿ ಹೇಳುವುದಾದರೆ, ಸಾಹಿತ್ಯ ರಂಗಭೂಮಿಗೆ ಅರ್ಥವನ್ನು ನೀಡಿದರೆ ಚಿತ್ರಕಲೆ ಅದಕ್ಕೆ ದೃಶ್ಯವನ್ನು ನೀಡುತ್ತದೆ; ರಂಗಭೂಮಿ ಈ ಎರಡನ್ನೂ ಜೀವಂತ ಅನುಭವವಾಗಿ ಪರಿವರ್ತಿಸುತ್ತದೆ. ಆದ್ದರಿಂದ ಕನ್ನಡ ರಂಗಭೂಮಿ ಮತ್ತು ಸಾಹಿತ್ಯ ಹಾಗೂ ಚಿತ್ರಕಲೆಗಳ ಸಂಬಂಧವನ್ನು ಪ್ರತ್ಯೇಕ ಕಲಾಮಾಧ್ಯಮಗಳ ಸಂಬಂಧವೆಂದು ನೋಡುವುದಕ್ಕಿಂತ ಪರಸ್ಪರ ಅವಲಂಬಿತವಾದ ಸೃಜನಶೀಲ ತ್ರಿವೇಣಿ ಸಂಗಮವೆಂದು ಪರಿಗಣಿಸುವುದು ಹೆಚ್ಚು ಸೂಕ್ತ.

**ಪರಾಮರ್ಶನ ಗ್ರಂಥಗಳು**


1. ಅಕ್ಷರ ಕೆ.ವಿ., ರಂಗಪ್ರಪಂಚ, ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ, 1994
2. ರಂಗಾಚಾರ್ಯ ಆದ್ಯ, (ಅನು) ನಾಟ್ಯಶಾಸ್ತ್ರ, ಭರತ, ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ, 2003
3. ಶಿವಪ್ರಕಾಶ್ ಎಚ್.ಎಸ್., ಸಾಹಿತ್ಯ ಮತ್ತು ರಂಗಭೂಮಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, 1993
4. ಸೀತಾರಾಮಯ್ಯ ಎಂ.ವಿ., ಸಾಹಿತ್ಯ ಮತ್ತು ಚಿತ್ರಕಲೆ, ರಾಘವ ಪ್ರಕಾಶನ, ಬೆಂಗಳೂರು, 1985
5. ಚಂದ್ರಕಾಂತ ಕುಸನೂರ, ಸಾಹಿತ್ಯ ಮತ್ತು ಚಿತ್ರಕಲೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, 1993
6. ಅಶೋಕ ಟಿ.ಪಿ., ರಕ್ತ ರಂಗಭೂಮಿ, ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ, 1982
7. ಸನದಿ ಬಿ.ಎ., ಕಲೆ ಮತ್ತು ಮನುಷ್ಯ ಸಂಸ್ಕೃತಿ, ಕಾಲಗತಿ ಪ್ರಕಾಶನ, ರಾಯಬಾಗ, 1990
8. ಕೃಷ್ಣಯ್ಯ ಎಂ.ಎಚ್., ಕಲೆ ಮತ್ತು ರಸಾಸ್ವಾದನೆ, ಸಂಕರ್ನಾಟಕ ಲಲಿತಕಲಾ ಅಕಾಡೆಮಿ :, ಬೆಂಗಳೂರು, 1992
9. ಕೃಷ್ಣಶಾಸ್ತ್ರೀ ಎ.ಆರ್., ಸಂಸ್ಕೃತ ನಾಟಕ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, 1988
10. ರಾಜಗೋಪಾಲಾಚಾರ್ಯ ಎಂ., ಸಂಸ್ಕೃತ ನಾಟಕಗಳ ತಂತ್ರ ಮತ್ತು ಪ್ರಯೋಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 1998


**Citation:** ಡಾ. ಕೃಷ್ಣಪ್ಪ. ಕೆ.ಎನ್ 2025. "ರಂಗಭೂಮಿ: ಸಾಹಿತ್ಯ ಮತ್ತು ಚಿತ್ರಕಲೆಯ ಸಂಬಂಧಗಳು". International Journal of Academic Research, 12(3): 130-137.

**Copyright:** ©2025 ಡಾ. ಕೃಷ್ಣಪ್ಪ. ಕೆ.ಎನ್. This is an open-access article distributed under the terms of the Creative Commons Attribution License (https://creativecommons.org/licenses/by/4.0/), which permits unrestricted use, distribution, and reproduction in any medium, provided the original author and source are credited.